ನಿಮ್ಮೊಡನೆ

# ಶಾಲೆಗಳಲ್ಲಿನ ಶೌಚಾಲಯಗಳ ನಿರ್ವಹಣೆಯ ಅವ್ಯವಸ್ಥೆ ಶಿಕ್ಷಕರಷ್ಟೆ ಹೊಣೆಗಾರರೆ? ಸರ್ಕಾರದ ಪಾತ್ರವಿಲ್ಲವೆ?

ನಾಗರಿಕಸಮಾಜವೊಂದರಉತ್ತಮಆರೋಗ್ಯದಸೂಚ್ಯಂಕಗಳಾಗಿಸರ್ಕಾರಿಶಾಲೆಗಳನ್ನುನೋಡಬಹುದಾದರೆ, ಆ ಶಾಲೆಗಳ ಸ್ಥಿತಿಗತಿಯನ್ನು ಅರ್ಥ ಮಾಡಿಕೊಳ್ಳಲು ಅವುಗಳಲ್ಲಿನ ಶೌಚಾಲಯಗಳನ್ನು ಗಮನಿಸಬಹುದು. ಕರ್ನಾಟಕದ ಪರಿಸ್ಥಿತಿ ನೋಡಿ: ಸಾವಿರಾರು ಶಾಲೆಗಳಲ್ಲಿ ಶೌಚಾಲಯಗಳೇ ಇಲ್ಲ; ಇರುವೆಡೆ ಅವುಗಳನ್ನು ನಿರ್ವಹಿಸುವುದಕ್ಕೆ ಸೌಲಭ್ಯಗಳಿಲ್ಲ. ಶಾಲಾ ಶೌಚಾಲಯಗಳ ನಿರ್ವಹಣೆ ಚರ್ಚೆಯ ವಿಷಯವಾಗಿರುವುದನ್ನು ನಾಗರಿಕ ಪ್ರಜ್ಞೆಯ ಜಾಗೃತಾವಸ್ಥೆ ಎಂದು ಹೇಳಬಹುದೆ?

ಶಾಲೆಗಳಲ್ಲಿನ ಶೌಚಾಲಯಗಳನ್ನು ಸ್ವಚ್ಛಗೊಳಿಸಲಿಕ್ಕೆ ಮಕ್ಕಳನ್ನು ಬಳಸಿಕೊಂಡಿರುವ ಪ್ರಕರಣಗಳು ರಾಜ್ಯದ ವಿವಿಧ ಭಾಗಗಳಿಂದ ಇತ್ತೀಚೆಗೆ ವರದಿಯಾಗಿವೆ. ಮಕ್ಕಳಿಂದ ಶೌಚಾಲಯಗಳನ್ನು ಶುಚಿಗೊಳಿಸಿರುವ ಬಗ್ಗೆ ಪೋಷಕ ವಲಯದಿಂದ ಮಾತ್ರವಲ್ಲ, ಶಿಕ್ಷಕ ವಲಯದಿಂದಲೂ ಆಕ್ಷೇಪ ವ್ಯಕ್ತವಾಗಿದೆ. ಸ್ವಚ್ಛತಾ ಕಾರ್ಯಕ್ಕೆ ಮಕ್ಕಳನ್ನು ಬಳಸಿದ ಶಿಕ್ಷಕರ ವಿರುದ್ಧ ಶಿಕ್ಷಣ ಇಲಾಖೆ ಕ್ರಮ ಕೈಗೊಂಡಿದೆ. ಶಾಲೆಗಳಲ್ಲಿನ ಶೌಚಾಲಯಗಳನ್ನು ಸ್ವಚ್ಛಗೊಳಿಸಲು ಮಕ್ಕಳನ್ನು ಬಳಸಬಾರದೆನ್ನುವುದು ಸರಿ. ಪಾಯಿಖಾನೆಗಳನ್ನು ಶುಚಿಗೊಳಿಸಲು ಮಕ್ಕಳನ್ನು ಬಳಸಿರುವ ಪ್ರಕರಣಗಳಿಗೆ ತೀವ್ರ ವಿರೋಧ ಎದುರಾಗಿರುವುದೂ ಸರಿ. ಈ ವಿರೋಧ ಬದಲಾದ ಸಂದರ್ಭದಲ್ಲಿನ ಸಾಮಾಜಿಕ ಎಚ್ಚರದ ಫಲ ಎನ್ನುವುದೂ ಸರಿಯೇ. ಆದರೆ, ಶೈಕ್ಷಣಿಕ ಚಟುವಟಿಕೆಗಳಾಚೆಗೆ ಅನ್ಯ ಕಾರ್ಯಗಳಿಗೆ ಮಕ್ಕಳನ್ನು ಬಳಸುವುದನ್ನು ಸರಿಯಲ್ಲವೆನ್ನುವುದನ್ನು ಒಪ್ಪಿಕೊಳ್ಳುತ್ತಲೇ, ನಾವೊಂದು ಪ್ರಶ್ನೆಗೆ ಉತ್ತರ ಕಂಡುಕೊಳ್ಳಬೇಕಾಗಿದೆ. ಶೌಚಾಲಯಗಳನ್ನು ಸ್ವಚ್ಛಗೊಳಿಸಬೇಕಾದವರು ಯಾರು ಎನ್ನುವ ಪ್ರಶ್ನೆಯದು. ಸ್ವಚ್ಛತಾ ಕಾರ್ಯಗಳಿಂದ ಎಳೆಯರನ್ನು ದೂರವಿಡಬೇಕೆನ್ನುವ ಕಾಳಜಿಯಲ್ಲಿ, ಆ ಕೆಲಸವನ್ನು ಯಾರು ಮಾಡಬೇಕೆನ್ನುವುದರ ಸ್ಪಷ್ಟತೆ ಇರುವುದೂ ಅಗತ್ಯ.

ಸದ್ಯದ ಸಂದರ್ಭದಲ್ಲಿ ಶೌಚಾಲಯಗಳನ್ನು ಸ್ವಚ್ಛಗೊಳಿಸಲಿಕ್ಕೆ ಉಳಿದಿರುವುದು ಎರಡು ದಾರಿ: ಶಿಕ್ಷಕರು ಕಸಬರಿಗೆ ಹಿಡಿಯುವುದು ಇಲ್ಲವೇ ಸಫಾಯಿ ಕರ್ಮಚಾರಿಗಳನ್ನು ಸ್ವಚ್ಛತಾ ಕಾರ್ಯಕ್ಕೆ ಬಳಸಿಕೊಳ್ಳುವುದು. ಈಗಾಗಲೇ ಶಿಕ್ಷಕರ ಮೇಲೆ ಹತ್ತಾರು ಪಠ್ಯೇತರ ಚಟುವಟಿಕೆಗಳನ್ನು ಹೇರಲಾಗಿದೆ. ಈ ಕರ್ತವ್ಯಭಾರಗಳ ಹೊರೆಗೆ ಶೌಚಾಲಯಗಳ ಸ್ವಚ್ಛತೆಯೂ ಅನಧಿಕೃತವಾಗಿ ಸೇರಿಕೊಂಡರೆ ಅಚ್ಚರಿಯೇನಿಲ್ಲ. ಶಾಲೆಗಳ ನಿರ್ವಹಣೆಗೆ ದೊರೆಯುತ್ತಿರುವ ಅನುದಾನದಿಂದ ಶೌಚಾಲಯಗಳನ್ನು ಸ್ವಚ್ಛಗೊಳಿಸುವ ಸಫಾಯಿ ಕರ್ಮಚಾರಿಗಳ ವೆಚ್ಚ ಭರಿಸುವುದು ಸಾಧ್ಯವಿಲ್ಲದಿರುವ ಸ್ಥಿತಿಯಲ್ಲಿ, ಸ್ವಚ್ಛತಾ ಕಾರ್ಯವನ್ನು ಶಿಕ್ಷಕರೇ ನಿರ್ವಹಿಸಬೇಕೆಂದು ಸರ್ಕಾರ ಪರೋಕ್ಷವಾಗಿ ಹೇಳುತ್ತಿರುವಂತಿದೆ.


ಸರ್ಕಾರಿ ಶಾಲೆಗಳಲ್ಲಿನ ಶೌಚಾಲಯಗಳ ನಿರ್ವಹಣೆಯ ಅವ್ಯವಸ್ಥೆ ಕೇವಲ ಆಯಾ ವಿದ್ಯಾಲಯಗಳಿಗೆ ಸಂಬಂಧಿಸಿದ ಸಮಸ್ಯೆಯಲ್ಲ. ಆ ಅವ್ಯವಸ್ಥೆ ಶಿಕ್ಷಣ ಕ್ಷೇತ್ರ ಸೇರಿದಂತೆ ಸಾಮಾಜಿಕ ನ್ಯಾಯವನ್ನು ಒದಗಿಸುವಲ್ಲಿ ವಿಫಲವಾಗಿರುವ ಸರ್ಕಾರದ ಲಜ್ಜೆಗೇಡಿತನವನ್ನು ಸೂಚಿಸುವಂತಹದ್ದೂ ಹೌದು.

ಸರ್ಕಾರಿ ಶಾಲೆಗಳಲ್ಲಿನ ಶೌಚಾಲಯಗಳ ನಿರ್ವಹಣೆಯ ಅವ್ಯವಸ್ಥೆ ಕೇವಲ ಆಯಾ ವಿದ್ಯಾಲಯಗಳಿಗೆ ಸಂಬಂಧಿಸಿದ ಸಮಸ್ಯೆಯಲ್ಲ. ಆ ಅವ್ಯವಸ್ಥೆ ಶಿಕ್ಷಣ ಕ್ಷೇತ್ರ ಸೇರಿದಂತೆ ಸಾಮಾಜಿಕ ನ್ಯಾಯವನ್ನು ಒದಗಿಸುವಲ್ಲಿ ವಿಫಲವಾಗಿರುವ ಸರ್ಕಾರದ ಲಜ್ಜೆಗೇಡಿತನವನ್ನು ಸೂಚಿಸುವಂತಹದ್ದೂ ಹೌದು.

ಶಿಕ್ಷಣ ಇಲಾಖೆಯ ಮಾರ್ಗಸೂಚಿಯ ಪ್ರಕಾರ, ಪಠ್ಯ ಮತ್ತು ಪಠ್ಯೇತರ ಶೈಕ್ಷಣಿಕ ಚಟುವಟಿಕೆಗಳು ಹಾಗೂ ಕ್ರೀಡಾ ಚಟುವಟಿಕೆಗಳ ಹೊರತಾಗಿ ಮಕ್ಕಳನ್ನು ಬೇರಾವುದೇ ಕೆಲಸಗಳಿಗೆ ಬಳಸಿಕೊಳ್ಳುವಂತಿಲ್ಲ. ಹಾಗಾಗಿ, ಮಕ್ಕಳನ್ನು ಸ್ವಚ್ಛತಾ ಕಾರ್ಯಗಳಿಗೆ ಬಳಸಿರುವ ಶಿಕ್ಷಕರು ದಂಡನೆಗೆ ಅರ್ಹರು. ಆದರೆ, ಈ ದಂಡನೆಯಲ್ಲಿ ಶೌಚಾಲಯ ನಿರ್ವಹಣೆಗೆ ಅಗತ್ಯವಿರುವಷ್ಟು ಅನುದಾನವನ್ನು ನೀಡದ ಸರ್ಕಾರಕ್ಕೂ ಪಾಲು ಸಲ್ಲಬೇಕಲ್ಲವೆ? ಸರ್ಕಾರಿ ಶಾಲೆಗಳ ಸಬಲೀಕರಣದ ಕುರಿತು ಸರ್ಕಾರಗಳ ಇಚ್ಛಾಶಕ್ತಿಯ ಕೊರತೆಯನ್ನು, ಶೌಚಾಲಯಗಳ ನಿರ್ವಹಣೆಯ ವಿಷಯದಲ್ಲೂ ಕಾಣಬಹುದು. ಮಕ್ಕಳ ಕಲಿಕೆಯೆನ್ನುವುದು ಸರ್ಕಾರಗಳ ಪಾಲಿಗೆ ಔಪಚಾರಿಕ ಪ್ರಕ್ರಿಯೆಯಾಗಿದೆಯೇ ಹೊರತು ಆದ್ಯತೆಯಾಗಿಲ್ಲ. ಸರ್ಕಾರಗಳ ವಿವೇಚನಾರಹಿತ ನಡವಳಿಕೆಗೆ ಸರ್ಕಾರಿ ಶಾಲೆಗಳು ನಿರಂತರವಾಗಿ ಬಡವಾಗುತ್ತಲೇ ಇವೆ; ಅಳಿದುಳಿದವು ಅಪೌಷ್ಟಿಕತೆಯಿಂದ ನರಳುತ್ತಿವೆ. ಸರ್ಕಾರಿ ಶಾಲೆಗಳನ್ನು ಅಭಿವೃದ್ಧಿಗೊಳಿಸುವುದಕ್ಕಾಗಿ ಖಾಸಗಿ ಸಂಸ್ಥೆಗಳ ಸಹಭಾಗಿತ್ವಕ್ಕೆ ಒತ್ತು ನೀಡುತ್ತಿರುವುದು ಸರ್ಕಾರ ತನ್ನ ಹೊಣೆಗಾರಿಕೆಯನ್ನು ನಿರ್ವಹಿಸುವುದರಲ್ಲಿ ವಿಫಲವಾಗಿರುವುದಕ್ಕೆ ನಿದರ್ಶನದಂತಿದೆ. ಪ್ರಾಥಮಿಕ ಶಿಕ್ಷಣದಲ್ಲಿ ಸಮಾನತೆಯನ್ನು ತರಲಿಕ್ಕೆ ವಿಫಲವಾಗಿರುವ ಸರ್ಕಾರ, ಸಾಮಾಜಿಕ ನ್ಯಾಯದ ಬಗ್ಗೆ ಎಗ್ಗಿಲ್ಲದಂತೆ ಮಾತನಾಡುತ್ತದೆ. ಮೂಲಭೂತ ಅಗತ್ಯಗಳಾದ ಕುಡಿಯುವ ನೀರು ಒದಗಿಸುವಿಕೆ, ಶೌಚಾಲಯಗಳ ನಿರ್ಮಾಣ ಹಾಗೂ ಅವುಗಳ ನಿರ್ವಹಣೆ ಸಾಧ್ಯವಾಗದೆ ಹೋದರೂ, ದೊಡ್ಡ ದೊಡ್ಡ ಸ್ಥಾವರಗಳನ್ನು ನಿರ್ಮಿಸುವ ಬಗ್ಗೆ ಯೋಜನೆಗಳನ್ನು ರೂಪಿಸಿ ಬೀಗುತ್ತದೆ.

ಶಾಲೆಗಳಲ್ಲಿನ ಶೌಚಾಲಯಗಳ ನಿರ್ವಹಣೆಗೆ ಮಕ್ಕಳನ್ನು ಬಳಸುವ ಸ್ಥಿತಿ ಸೃಷ್ಟಿಯಾಗಿರುವುದಕ್ಕೆ ಸರ್ಕಾರದ ಪಾತ್ರವೇ ಪ್ರಮುಖವಾದುದಾಗಿದೆ. ಅಗತ್ಯ ಸಂಪನ್ಮೂಲಗಳನ್ನು ಒದಗಿಸಿದ ನಂತರವೂ ಕರ್ತವ್ಯಲೋಪವಾದಲ್ಲಿ ಶಿಕ್ಷಕರ ಮೇಲೆ ಕ್ರಮ ಕೈಗೊಳ್ಳುವುದು ಸರಿ. ಆದರೆ, ಹಣಕಾಸಿನ ಸಂಕಷ್ಟ ಸೃಷ್ಟಿಸಿ, ಶಿಕ್ಷಕರನ್ನು ಅಸಹಾಯಕರನ್ನಾಗಿಸುವುದು ಸರಿಯಲ್ಲ. ಶಾಲೆಗಳಲ್ಲಿನ ಶೌಚಾಲಯಗಳ ನಿರ್ವಹಣೆಗೆ ಸಂಬಂಧಿಸಿದಂತೆ ಶಾಶ್ವತ ಪರಿಹಾರವೊಂದನ್ನು ಸರ್ಕಾರ ರೂಪಿಸಬೇಕಾಗಿದೆ. ಸ್ಥಳೀಯ ಆಡಳಿತದ ಮೂಲಕ ಶೌಚಾಲಯಗಳ ನಿರ್ವಹಣೆ ಮಾಡುವ ಬಗ್ಗೆಯೂ ಯೋಚಿಸಬಹುದಾಗಿದೆ.

■ ರಘುನಾಥ ಚ.ಹ.



ಈಶ್ವರ್